O.S.197/2014
DW-2

**ಸಾಕ್ಷಿಯನ್ನು ದಿನಾಂಕ 08-04-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲು- ವಾದಿ ಪರ ಶ್ರೀ TKM ವಕೀಲರಿಂದಃ</u>**

**1.** ಮನೆಯ ವಿಚಾರವಾಗಿ ಪ್ರತಿವಾದಿ, ವಾದಿ ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿ ನನ್ನ ದೊಡ್ಡಪ್ಪ. ಅಂಚಿಮಾರನಹಳ್ಳಿಯಿಂದ ಬೆಂಡೋಣೆಗೆ ಹೋಗುವ ರಸ್ತೆಯನ್ನು ನಾನು ನೋಡಿರುತ್ತೇನೆ. ಸದರಿ ರಸ್ತೆಯು ನಾನು ಹುಟ್ಟುವುದಕ್ಕಿಂತ ಮೊದಲಿನಿಂದಲೂ ಇರುತ್ತದೆ. ಸಿದ್ದಲಿಂಗಯ್ಯ ಮತ್ತು ಸಿದ್ದಯ್ಯರವರು ನನ್ನ ಮುತ್ತಾತಂದಿರು. ನನ್ನ ತಾತ ಹನುಮಂತಯ್ಯರವರಿಗೆ **3** ಜನ ಮಕ್ಕಳು. ಸದರಿ ಹನುಮಂತಯ್ಯರವರ ತಂದೆ ಹೆಸರು ನನಗೆ ಗೊತ್ತಿಲ್ಲ. ನಮ್ಮ ಊರಿನ ಹಾಲಿನ ಡೈರಿಯನ್ನು ನಾನು ನೋಡಿದ್ದೇನೆ. ಸದರಿ ಹಾಲಿನ ಡೈರಿಯ ಪಶ್ಚಿಮಕ್ಕೆ ಅಂಚಿಮಾರನಹಳ್ಳಿಯಿಂದ ಬೆಂಡೋಣೆಗೆ ಹೋಗುವ ರಸ್ತೆ ಬರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಪಶ್ಚಿಮಕ್ಕೆ ಸರ್ವೆ ನಂಬರ್ **5/2** ಜಮೀನು ಬರುತ್ತದೆ ಎಂದರೆ ಸರಿ.

**2.** ದಿಃ**26.01.1934** ರಂದು ಸುಮಾರು **77** ಅಂಕಣದ ಮನೆ ಮತ್ತು ಅದರ ಮುಂದೆ ಇರುವ ಹುಲ್ಲುವಾಮೆ ಜಾಗವನ್ನು ನನ್ನ ಮುತ್ತಾತ ಸಿದ್ದಲಿಂಗಯ್ಯ ಮತ್ತು ಸಿದ್ದಯ್ಯರವರು ವಾದಿಯ ತಾತ ದೊಡ್ಡವೀರಪ್ಪರವರಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿ ಕಾನೇಶುಮಾರಿ ನಂಬರ್ **88** ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಪೂರ್ವಕ್ಕೆ ರಸ್ತೆ ಮತ್ತು ಹನುಮಂತರಾಯಪ್ಪನ ಮನೆ, ಪಶ್ಚಿಮಕ್ಕೆ ಬೆಂಡೋಣೆಯಿಂದ ಅಂಚಿಮಾರನೇನಹಳ್ಳಿಗೆ ಹೋಗುವ ರಸ್ತೆ, ನಂತರ ಸಿದ್ದಲಿಂಗಪ್ಪರವರಿಗೆ ಸೇರಿದ ಜಮೀನು, ಉತ್ತರಕ್ಕೆ ರಸ್ತೆ, ನಂತರ ರಾಮೇಗೌಡರ ಮನೆ, ದಕ್ಷಿಣಕ್ಕೆ ದೊಡ್ಡಯ್ಯನ ಹುಲ್ಲಿನ ಮನೆ ಮತ್ತು ತಿಮ್ಮಪ್ಪಸ್ವಾಮಿ ದೇವಸ್ಥಾನದ ಚಕ್ಕುಬಂದಿ ಒಳಗಿನ ಆಸ್ತಿಯನ್ನು

ಮಾರಾಟ ಮಾಡಿರುತ್ತಾರೆಂದರೆ ಸರಿ. ಸದರಿ ಚಕ್ಕುಬಂದಿ ಒಳಗಿನ ಆಸ್ತಿಯಲ್ಲಿ ದೊಡ್ಡವೀರಯ್ಯರವರು ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ, ಪ್ರತಿವಾದಿ ಸ್ವಾಧೀನದಲ್ಲಿದ್ದರು. ದೊಡ್ಡವೀರಯ್ಯನವರು ಮೃತಪಟ್ಟ ನಂತರ ಸದರಿ ಆಸ್ತಿ ಅವರ ಮಗ ತಿಮ್ಮಯ್ಯರವರೇ ಸ್ವಾಧೀನಕ್ಕೆ ಬಂದಿದ್ದು, ಅವರ ಮರಣ ನಂತರ ವಾದಿಯು ಸದರಿ ಆಸ್ತಿಯಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ.

**3.** ತಿಮ್ಮಯ್ಯರವರಿಗೆ ವಾದಿ, ಹನುಮಂತರಾಯಪ್ಪ ಮತ್ತು ದೊಡ್ಡಯ್ಯರವರು ಮಕ್ಕಳು. ಸದರಿಯವರು **2003** ನೇ ಸಾಲಿನಲ್ಲಿ ಅವರ ಕುಟುಂಬದ ಆಸ್ತಿಗಳನ್ನು ಭಾಗ ಮಾಡಿಕೊಂಡಿದ್ದು, ದಾವಾ ಆಸ್ತಿಯು ವಾದಿಯ ಭಾಗಕ್ಕೆ ಬಂದಿದ್ದು ಅವರೇ ಸ್ವಾಧೀನದಲ್ಲಿರುತ್ತಾರೆಂದರೆ ಸರಿ. ವಾದಿಯು ಸ್ವಾಧೀನದಲ್ಲಿರುವ ಆಸ್ತಿಯ ಸುತ್ತಲೂ ಮುಳ್ಳು ತಂತಿ ಬೇಲಿಯನ್ನು ಹಾಕಿಕೊಂಡಿರುತ್ತಾರೆಂದರೆ, ಪ್ರತಿವಾದಿಯ ಆಸ್ತಿಗೆ ಮುಳ್ಳು ತಂತಿ ಬೇಲಿಯನ್ನು ಹಾಕಿಕೊಂಡಿರುತ್ತಾರೆ. ವಾದಿಯು ಹಳೇ ಮನೆಯನ್ನು ಕಿತ್ತು ಹಾಕಿ ಪೂರ್ವ ಪಶ್ಚಿಮ **40** ಅಡಿ ಉತ್ತರ ದಕ್ಷಿಣ **30** ಅಡಿ ಜಾಗದಲ್ಲಿ ಮನೆಯನ್ನು ಕಟ್ಟಿರುತ್ತಾರೆಂದರೆ ಸರಿ. ಸದರಿ ಮನೆಯ ಪಶ್ಚಿಮಕ್ಕೆ ದನಗಳನ್ನು ಕಟ್ಟಿ ಹಾಕಲು **18x35** ಅಡಿ ಜಾಗದಲ್ಲಿ ಶೀಟ್ ನ ಶೆಡ್ಡನ್ನು ಹಾಕಿರುತ್ತಾರೆಂದರೆ ಸರಿಯಲ್ಲ. ಸದರಿ ಶೆಡ್ ನ ಪಶ್ಚಿಮಕ್ಕೆ ಬೆಂಡೋಣೆ, ಅಂಚಿಮಾರನಹಳ್ಳಿಗೆ ಹೋಗುವ ರಸ್ತೆವರೆಗೂ ವಾದಿಯು ತಂತಿ ಬೇಲಿಯನ್ನು ಹಾಕಿಕೊಂಡು ತಿಪ್ಪೆಯನ್ನು ಹಾಕಿರುತ್ತಾರೆಂದರೆ ಸರಿ. ಸದರಿ ಆಸ್ತಿಯ ದಕ್ಷಿಣಕ್ಕೆ ತಿಮ್ಮಪ್ಪರವರ ಮನೆ ಮತ್ತು ತಿಮ್ಮಪ್ಪಸ್ವಾಮಿ ದೇವಸ್ಥಾನ ಬರುತ್ತದೆ ಎಂದರೆ ಸರಿ. ಸದರಿ ಆಸ್ತಿಯ ಉತ್ತರಕ್ಕೆ ಹಾಲಿನ ಡೈರಿ ಮತ್ತು ಗ್ರಾಮಠಾಣಾ ಇರುತ್ತದೆ ಎಂದರೆ ಸರಿ.

**4.** ಬೆಂಡೋಣೆ ಮತ್ತು ಅಂಚಿಮಾರನಹಳ್ಳಿಯ ರಸ್ತೆಯ ಪಶ್ಚಿಮಕ್ಕೆ ಇರುವ ಸ.ನ. **5/8** ವಿಸ್ತೀರ್ಣ **1** ಎಕರೆ **10** ಗುಂಟೆ ಇರುತ್ತದೆ, ಸದರಿ ಜಮೀನಿನಲ್ಲಿ ವೆಂಕಟಸ್ವಾಮಿ, ಸಿದ್ದಗಂಗಯ್ಯ ಮತ್ತು ಶಿವಣ್ಣರವರು ಸುಮಾರು ವರ್ಷಗಳಿಂದ

ಸ್ವಾಧೀನದಲ್ಲಿರುತ್ತಾರೆ. ಸದರಿ ಶಿವಣ್ಣರವರು ನನ್ನ ತಂದೆ ಆಗಿರುತ್ತಾರೆ. ಈ ಕೇಸಿನ ಬಗ್ಗೆ ನನಗೇನು ಗೊತ್ತಿಲ್ಲದೇ ಇದ್ದರೂ ನನ್ನ ದೊಡ್ಡಪ್ಪನಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗೂ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ. ದಾವಾ ಆಸ್ತಿಯನ್ನು ನಮ್ಮ ಮುತ್ತಾತಂದಿರು ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.197/2014
DW-2

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.
*Koratagere.*